

ಕೊಟ್ಟೂರಿನಲ್ಲಿ ಬಿಕ್ಕಿಮರಡಿ ದುರುಗಮ್ಮನ ರಥೋತ್ಸವದಲ್ಲಿ ತೇರಿಗೆ ಬಾಳೆಹಣ್ಣು ಮತ್ತು ಕೋಳಿಗಳನ್ನು ಎಸೆಯುವ ಸಂಪ್ರದಾಯವಿದೆ ಚಿತ್ರ: ದಿನೇಶ್ ಮಾನೀರ್

## ಧರ್ಮಸ್ಥಳದ ಲಕ್ಷದೀಪೋತ್ಸವದ ಬೆಳಕು

ಧರ್ಮಸ್ಥಳದಲ್ಲಿ ನಡೆಯುವ ಲಕ್ಷ ದೀಪೋತ್ಸವದ ಸಂಭ್ರಮವೇ ಬೇರೆ. ಎಂಟೂವರೆ ದಶಕಗಳಿಂದ ವರ್ಷಕ್ಕೊಮ್ಮೆ ಲಕ್ಷಾಂತರ ದೀಪಗಳ ಬೆಳಕು ಅಲ್ಲಿ ಪ್ರಜ್ವಲಿಸುತ್ತದೆ. ಅದರೊಂದಿಗೆ ಸರ್ವಧರ್ಮ ಸಮ್ಮೇಳನ ಹಾಗೂ ಸಾಹಿತ್ಯ ಸಮ್ಮೇಳನವೂ ನಡೆಯುತ್ತದೆ. ವಸ್ತು ಪ್ರದರ್ಶನ, ಸ್ತ್ರೀ ಶಕ್ತಿ ಸಂಘಗಳ ಮಿಲನವೂ ವಿಶೇಷ.



ಇದಷ್ಟೇ ಅಲ್ಲ. ಕಾರಣಿಕ ನುಡಿಯುವುದು ಕೆಲವು ಜಾತ್ರೆಗಳ ಪ್ರಧಾನ ಭಾಗ. ಕಾರಣಿಕವನ್ನು ಕೇಳಿಸಿಕೊಳ್ಳಲೆಂದೇ ಲಕ್ಷಾಂತರ ಭಕ್ತರು ಜಾಗರಣೆ ಮಾಡುತ್ತಾರೆ. ಕಾರಣಿಕದ ನುಡಿಗಳನ್ನು ಪ್ರಸಕ್ತ ಪರಿಸ್ಥಿತಿಗಳಿಗೆ ಅನ್ವಯಿಸಿಕೊಂಡು ವಿಶ್ಲೇಷಿಸುವುದು ತಲೆಮಾರುಗಳಿಂದ ನಡೆದುಬಂದ ಪದ್ಧತಿ. ಹಡಗಲಿ ತಾಲ್ಲೂಕಿನ ಮೈಲಾರ ಜಾತ್ರೆ, ದೇವರ ಗುಡ್ಡದ ಜಾತ್ರೆಯು ಕಾರಣಿಕದಿಂದಲೇ ಪ್ರಸಿದ್ಧ.

ಜಾತ್ರೆಗಳಲ್ಲೂ ಸಸ್ಯಾಹಾರಿ–ಮಾಂಸಾಹಾರಿ ಎಂಬ ವಿಂಗಡಣೆಗಳು ಉಂಟು. ಬಹುತೇಕ ಗ್ರಾಮದೇವತೆಗಳ ಜಾತ್ರೆಗಳಲ್ಲಿ ಬಾಡೂಟಕ್ಕೇ ಆದ್ಯತೆ. ಕುರಿ, ಕೋಳಿ, ಕೋಣ ಬಲಿಕೊಟ್ಟು ಉಣ್ಣುವ ಆಚರಣೆ. ಸಾತ್ವಿಕವಾದ ಸಿಹಿಯೂಟ ಏನಿದ್ದರೂ ಶಿಷ್ಟ ದೇವರುಗಳ ಜಾತ್ರೆ–ಉತ್ಸವಗಳ ಆಹಾರ ಸಂಸ್ಕೃತಿಯನ್ನು ಹೇಳುತ್ತದೆ. ದ್ರಾವಿಡ ಸಂಸ್ಕೃತಿಯ ಜಾತ್ರೆಗಳಲ್ಲಿ ಮಾಂಸವೇ ನೈವೇದ್ಯ, ಶೈವ, ವೈಷ್ಣವ ಸಂಸ್ಕೃತಿಯಲ್ಲಿ ಅದು ನಿಷಿದ್ಧ.

### ನಮ್ಮೂರ ತೇರ ನೋಡಬನ್ನಿ...

ತೇರು ಯಾವುದು? ಕಲ್ಲಿನದೇ? ಮರದ್ದೇ? ಬೆಳ್ಳಿ, ಚಿನ್ನದ್ದೇ?

ಇದು, ಆ ದೇವರ ಮತ್ತು ಭಕ್ತರ ಶ್ರೀಮಂತಿಕೆಯನ್ನು, ಆಚರಣೆಯ ಸ್ವರೂಪವನ್ನೂ ಆಧರಿಸಿರುತ್ತದೆ. ಬಹುತೇಕ ರಥಗಳ ಮೈ ಮರದ್ದಾಗಿದ್ದರೆ, ಚಕ್ರಗಳು ಕಬ್ಬಿಣದ್ದಾಗಿರುತ್ತವೆ. ಬಳ್ಳಾರಿ ನಗರದಲ್ಲಿ ನಡೆಯುವ ಕನಕದುರ್ಗಮ್ಮ ಸಿಡಿಬಂಡಿ ಉತ್ಸವದಲ್ಲಿ ಬಳಸುವ ರಥ ಪೂರ್ಣ ಮರದ್ದು. ಅದನ್ನು ಎಳೆಯುವುದು ನಾಲ್ಕು ಜೋಡೆತ್ತುಗಳು ಎಂಬುದು ವಿಶೇಷ.

ಮರದ ತೇರುಗಳ ನಡುವೆ ಮೈಸೂರು ದಸರಾದ ಅಂಬಾರಿಯನ್ನು ನೆನಪಿಸಿಕೊಳ್ಳಿ. ಅದು ಚಿನ್ನದ್ದು. ಮೇಲುಕೋಟೆಯ ವೈರಮುಡಿ ಉತ್ಸವ? ಕೇಜಿಗಟ್ಟಲೆ ಚಿನ್ನಾಭರಣವುಳ್ಳ ವೈರಮುಡಿಗೆ ಬಿಗಿಭದ್ರತೆ. ರಾಘವೇಂದ್ರಸ್ವಾಮಿ ಉತ್ಸವದಲ್ಲಿ ಬೆಳ್ಳಿರಥಗಳೂ ಉಂಟು.

ನಮ್ಮೂರ ಕಲ್ಲಿನ ಚಕ್ರಗಳ ಮರದ ತೇರಿಗೆ